ದೇವರ ಸಮಾರಾಧನೆ.

– ಮಂಗಳ ಸ್ನಾನ
– ಅರಿಶಿಣ ಕುಂಕುಮ.
– ಛಪ್ಪರ (ಹಂದರ)
– ಒಳಕಲ್ಲು
– ವನಕಿ
– ಹಸಿರು ಬಳೆಗಳು
– ಗೋದಿಹಿಟ್ಟು
– ಕಡ್ಲೇಹಿಟ್ಟು
– ಬಳಿ
– ಮೆಹಂದಿ
– ಹೂವು
– ಗೆಜ್ಜೆವಸ್ತ್ರ, ಹೂಬತ್ತಿ, ಮಂಗಳಾರತಿ ಬತ್ತಿ.
– ಪಾನಕಾ ಕೋಸಂಬ್ರಿ.
– ಛಪ್ಪರಕ್ಕೆ ಕಟ್ಟಲು ಕೆಂಪು ರೆಷ್ಮೇ ಬಟ್ಟೆ.
– ವಿಳೆದೆಲೆ, ಅಡಿಕೆ ಬೆಟ್ಟ.
– ನೆನೆದ ಕಡ್ಲಿ
– ಮಂತ್ರಾಕ್ಷತೆ.
– ಬೆಲ್ಲ
– ಒಣ ಖೊಬ್ಬರಿ ಬಟ್ಟಲು.
– ಗಣಪತಿ ಇಡಲು ಹಿತ್ತಾಳೆ ಡಬ್ಬಿ.
– ಎಣ್ಣಿ, ತುಪ್ಪ,
– ಆರತಿ ತಟ್ಟೆ, ನೀಲಾಂಜನ.
– ಬೆಂಕಿ ಪೊಟ್ಟಣ
– ಬಾಳೆ ಕಂಬ
– ಮಾವಿನ ಸೊಪ್ಪು.
– ತೆಂಗಿನ ಗರಿಗಳು.
– ಬಳೆಗಾರನಿಗೆ ಒಂದು ಬ್ಲೌಜಪೀಸಿನಲ್ಲಿ ಅಕ್ಕಿ, ಬೆಲ್ಲ, ಕಡ್ಲೇಬೇಳೆ, ವಿಳೆದೆಲೆ ಅಡಿಕೆ, ದಕ್ಷಿಣೆ ಕಟ್ಟಿ ಇಡಬೇಕು.

ಚಪ್ಪರದ ಪೂಜೆ

ದೇವರ ಸಮಾರಾಧನೆಯ ದಿನ ಬೆಳಿಗ್ಗೆ ರಾಹುಕಾಲದ ಸಮಯ ಬಿಟ್ಟು ಶುಭ ಮುಹೂರ್ತದಲ್ಲಿ ಚಪ್ಪರದ ನಾಲ್ಕು ಕಂಭಗಳಲ್ಲಿ ದೇವತ್ರ ಮೂಲೆಯಲ್ಲಿರುವ ಕಂಬಕ್ಕೆ ಕೆಂಪು ರೇಷ್ಮೇ ಬಟ್ಟೆಯಲ್ಲಿ ಅರಿಶಿಣ ಕುಂಕುಮ, ಮಂತ್ರಕ್ಷತೆ, ಉತ್ತತ್ತಿ, ಅರಿಶಿಣ ಬೇರು ಹಾಕಿ ಗಂಟು ಕಟ್ಟಿ ಕಂಬಕ್ಕೆ ಕಟ್ಟಬೇಕು. ಅರಿಶಿಣ ಕುಂಕುಮ, ಮಂತ್ರಾಕ್ಷತೆಯಿಂದ ಪೂಜೆ ಮಾಡಿ ಕಟ್ಟಿದ ಹೂವನ್ನು ಕಂಭಕ್ಕೆ ಸುತ್ತಿ, ಗೆಜ್ಜೆವಸ್ತ್ರ ಏರಿಸಿ ಪೂಜೆ ಮಾಡಿ ಪ್ರದಕ್ಷಿಣಾಕಾರವಾಗಿ ಮಿಕ್ಕ ಎಲ್ಲ ಕಂಬಗಳಿಗೂ ಪೂಜೆ ಮಾಡಿ ಊದಿನಕಡ್ಡಿ ಹಚ್ಚಿ, ಯಾವುದಾದರೂ ಹಣ್ಣನ್ನು ನೈವೇದ್ಯ ಮಾಡಿ, ಮಂಗಳಾರತಿ ಮಾಡ್ಬೇಕು.

ದೇವರ ಪೂಜೆ –

ಗಣಪತಿ ಪೂಜೆ, ಕುಲದೇವತಾ ಪೂಜೆ ಮುಗಿಸಿ ವಧುವರರ ನೂತನ ವಸ್ತ್ರ, ಆಭರಣಗಳನ್ನು ದೇವರ ಮುಂದೆ ಇಟ್ಟು ಪೂಜೆ ಮಾಡಬೇಕು.

ಹೂವಿಳ್ಯ.

ಎಷ್ಟು ಜನ ಮುತ್ತೈದೆಯರಿಗೆ ಕೊಡುತ್ತೀರೊ ಅಷ್ಟು ಜನರಿಗೆ.

- ಅರಿಶಿಣ ಕುಂಕುಮ ಪೊಟ್ಟಣಗಳು. ೫೦
- ೧೦ ಡಜನ್ ಬಳೆ / ಬಳೆಗಾರನನ್ನು ಕರೆಸುವದು.
- ಬ್ಲೌಜ್ ಪೀಸ್ ೫೦
- ಹೆಸರುಬೇಳೆ ಕೋಸಂಬರಿ (ಐಸ್ಕ್ರೀಮ್ ಕಪ್ಪುಗಳಲ್ಲಿ ಹಾಕಿ – ೨೫)
- ಕಡ್ಲೇಬೇಳೆ ಕೋಸಂಬರಿ (ಐಸ್ಕ್ರೀಮ್ ಕಪ್ಪುಗಳಲ್ಲಿ ಹಾಕಿ –೨೫)
- ಚಿಗಳಿ ಉಂಡೆಗಳು –೨೫
- ತಂಬಿಟ್ಟಿನ ಹಣ್ಣುಗಳು –೨೫.
- ಐದು ತರಹದ ಉಂಡೆಗಳು.
- ತೆಂಗಿನಕಾಯಿಗಳು –೨೫
- ಇದೆಲ್ಲವನ್ನು ಇಡಲು ಬೆಸಿನ್ / ತಟ್ಟೆ –೨೫
- ಕ್ಯಾರಿಬ್ಯಾಗುಗಳು –೫೦.
- ಪಾನಕ (ಸ್ಟೀಲ್ ಲೋಟ/ ಪೇಪರ್ ಲೋಟ)–೨೫.
- ದಕ್ಷಿಣೆ.
- ಮುತ್ತೈದೆಯರಿಗೆ ಕಾಲು ತೊಳೆಯಲು –೨ ಮಣೆ, ಬಕೆಟನಲ್ಲಿ ನೀರು, ತಂಬಿಗೆ, ಅರಿಶಿಣ, ಕುಂಕುಮ.

ಬಿಡದಿ ಮನೆ ಸಾಮಾನು

– ದೇವರ ಫೊಟೊ
– ದೇವರ ಫೋಟೊಕ್ಕೆ ಹಾಕಲು ಹೂವಿನ ಹಾರ
– ಫೋಟೋ ಇಡಲು ಮಣೆ
– ಬಿಂದಿಗೆ
– ದೀಪದ ಕಂಬ
– ಒಂದು ತಟ್ಟೆಯಲ್ಲಿ ಅರಿಶಿಣ ಕುಂಕುಮ, ಮಂತ್ರಾಕ್ಷತೆ ತುಂಬಿದ ಬಟ್ಟಲು, ಗಂಟೆ, ಹಲಗಾರತಿ, ಊದಿನಕಡ್ಡಿ.
– ಗೆಜ್ಜೆವಸ್ತ್ರ ೫/೧೦
– ಕರ್ಪೂರ
– ಮೇಣದ ಬತ್ತಿಗಳು
– ಚೂರು ಅಡಿಕೆ
– ಹೂ ಬತ್ತಿಗಳು
– ಅಡಿಕೆಪುಡಿ ಪಟ್ಟಣಗಳು

ಆಹಾರ ಸಾಮಗ್ರಿಗಳು

ಸ್ಟೀಲ್ ಡಬ್ಬಿಗಳಲ್ಲಿ

– ೧/೪ ಕೆ.ಜಿ. ಉದ್ದಿನ ಬೇಳೆ
– ೧/೪ ಕೆ.ಜಿ. ಹೆಸರು ಬೇಳೆ
– ೧/೪ ಕೆ.ಜಿ. ಕಡಲೆ ಬೇಳೆ
– ೧/೪ ಕೆ.ಜಿ. ಕಾಫಿ ಪುಡಿ
– ೧/೪ ಕೆ.ಜಿ. ರವೆ
– ೧/೪ ಕೆ.ಜಿ. ಸಕ್ಕರೆ
– ೧/೪ ಕೆ.ಜಿ. ಅಕ್ಕಿ ಹಿಟ್ಟು

ಪ್ಲಾಸ್ಟಿಕ್ ಬೆಸಿನ್ನಲ್ಲಿ

– ೫ ಬೆಲ್ಲದ ಅಚ್ಚುಗಳು
– ೫ ತೆಂಗಿನಕಾಯಿಗಳು

ಸ್ಟೀಲ್ ಪಾತ್ರೆಯಲ್ಲಿ

– ೧/೨ ಲೀಟರ್ ಹಾಲಿನ ಪ್ಯಾಕೆಟ್
– ೧/೨ ಲೀಟರ್ ಮೊಸರಿನ ಪ್ಯಾಕೆಟ್
– ೧/೨ ಲೀಟರ್ ತುಪ್ಪದ ಪ್ಯಾಕೆಟ್
– ೧/೨ ಲೀಟರ್ ಎಣ್ಣೆಯ ಪ್ಯಾಕೆಟ್

ಸ್ಟೀಲ್ ಡಬ್ಬಿಯಲ್ಲಿಡುವದು

– ೫. ಕೆ.ಜಿ. ಅಕ್ಕಿ
– ೨ಕೆ.ಜಿ. ತೊಗರಿ ಬೇಳೆ

ತರಕಾರಿ ಬುಟ್ಟಿ

– ಸ್ವಲ್ಪ ಹುರಳಿಕಾಯಿ
– ಸ್ವಲ್ಪ ಆಲೂಗಡ್ಡೆ
– ಸ್ವಲ್ಪ ಕ್ಯಾರೆಟ್
– ೨ ಸೀಮೆಬದನೆಕಾಯಿಗಳು
– ೨ ನವಿಲುಕೋಸುಗಳು

ಸ್ಟೀಲ್ ಬೆಸಿನ್ನಲ್ಲಿ

– ೧೦ ಹಪ್ಪಳ
– ೧೦ ಸಂಡಿಗೆ

ಇತರ ಸಾಮಾನುಗಳು

–ಸ್ಟೀಲ್ ಊಟದ ತಟ್ಟೆ
– ಲೋಟ
– ಕುಕ್ಕರ್
– ಪಾತ್ರೆಯ ಸೆಟ್
– ವಂಶ ಪಾತ್ರೆ
– ಕಡುಗೋಲು
– ತಪ್ಪಲೆ
– ಕೊಳಗ
– ಸೌಟು

- ಮಿಕ್ಸಿ
- ಪಟ್ಟದಗೊಂಬೆ.
- ಬಿಂದಿಗೆ
- ಪೌಡರು ಮತ್ತು ಬಫ್
- ಟೂತ್ ಪೇಸ್ಟ
- ಬಾಚಣಿಕೆ
- ಕನ್ನಡಿ
- ಸೋಪು ಮತ್ತು ಸೋಪ್ ಬಾಕ್ಸ
- ಕುಂಕುಮ
- ಶಾಂಪು
- ಕಾಡಿಗೆ
- ಫ್ಲೇಸ್ ಕ್ರೀಂ
- ದೊಡ್ಡ ಟವೆಲ್
- ಹೇರ್ಪಿನ್, ಸೇಫ್ಟಿ ಪಿನ್
- ಹೇರ್ ಆಯಿಲ್
- ಕೊಬ್ಬರಿ ಎಣ್ಣೆ
- ಕ್ಯಾಂಡಲ್
- ಮಾವಿನ ಸೊಪ್ಪು

****

ಬೀಗರ ಆಗಮನ

– ಸಾಮಾನ್ಯವಾಗಿ ಹೆಣ್ಣಿನಕಡೆಯವರು ವ್ಯವಸ್ಥೆ ಮಾಡಿದ ವಾಹನಗಳಲ್ಲಿ ಗಂಡಿನ ಕಡೆಯವರು ಛತ್ರಕ್ಕೆ ಆಗಮಿಸುತ್ತಾರೆ. ಗಂಡಿನವರು ಛತ್ರದ ಬಾಗಿಲಿಗೆ ಬರುವ ಹೊತ್ತಿಗೆ ಹೆಣ್ಣಿನವರು ಕಳಶ ಕನ್ನಡಿ ಮಂಗಳದ್ರವ್ಯಗಳ ಸಮೇತ ಆಹ್ವಾನಿಸಿ ಹೂವಿನ ಹಾರಗಳನ್ನು ಹಾಕಿ ಗೌರವಿಸಬೇಕು. ನಂತರ ಗಂಡಿನವರನ್ನು ದೇವರ ಮನೆಗೆ / ಬೆಡ್ಡಿ ಮನೆಗೆ ಕರೆತಂದು ಅಲ್ಲಿನ ವ್ಯವಸ್ಥೆಗಳನ್ನು ವಿವರಿ ಗಂಡಿನವರು ತಂಗುವ ಕೋಣೆಗೆ ಕರೆದೊಯ್ಯಬೇಕು.

ಈಕಾರ್ಯಕ್ರಮಕ್ಕೆ ಬೇಕಾಗುವ ಸಾಮಗ್ರಿಗಳು:

– ಅರಿಶಿಣ ಕುಂಕುಮದ ತಟ್ಟೆ
– ಕಳಶ ಕನ್ನಡಿ ತಟ್ಟೆ
– ಒಂದು ಮರದ ಮಣೆ
– ಮೂರು ದಪ್ಪ ಹಾರಗಳು (ವರ, ವರನ ತಂದೆ, ವರನ ತಾಯಿಗೆ)
– ಉಳಿದವರಿಗೆ ಹಾಕಲು ೨೦ ಹಾರಗಳು
– ವರನ ಕೈಗೆ ಕೊಡ್ಲು ತೆಂಗಿನಕಾಯಿ.
– ವರನ ಕಾಲು ತೊಳೆಯಲು ಒಂದು ತಂಬಿಗೆ ನೀರು.
– ವರನ ಕಾಲು ಒರೆಸಲು ಒಂದು ಹೊಸ ಟವೆಲ್.
– ಎದುರಕ್ಕಿ / ಭತ್ತದ ಅರಳು
– ದೃಷ್ಟಿ ನಿವಾಳಿಸಲು ಈಡುಕಾಯಿ
– ಆರತಿ ತಟ್ಟೆ / ನೀರು

ಗಂಡಿನವರು ವಿಶ್ರಾಂತಿ ಪಡೆದ ಮೇಲೆ ಅವರನ್ನು ಉಪಹಾರಕ್ಕೊ, ವರಪೂಜೆಗೂ ಅಹ್ವಾನಿಸಬೇಕು. ಸಾಮಾನ್ಯವಾಗಿ ವಧುವಿನ ತಾಯಿ / ತಂದೆಯರು ಈ ಕೆಲಸವನ್ನು ಮಾಡುವ ಪದ್ಧತಿ ಇದೆ. ಇವರ ಜೊತೆಯಲ್ಲಿ ಇತರ ಹಿರಿಯರು / ಕಿರಿಯರು ಭಾಗವಹಿಸಬಹುದು.

ವರಪೂಜೆ

ನಮ್ಮ ಸಂಪ್ರದಾಯದಲ್ಲಿ ವರ ಎಂದರೆ ನಾರಾಯಣನ ಸ್ವರೂಪ. ಲಕ್ಷ್ಮೀ ಸ್ವರೂಪಳಾದ ಮಗಳನ್ನು ಕೈ ಹಿಡಿಯಲು ನಾರಾಯಣ ಸ್ವರೂಪನಾದ ವರನು ಬಂದಿರುತ್ತಾನೆ ಎಂಬ ಭಾವನೆಯ ಅಭಿವ್ಯಕ್ತಿ ವರಪೂಜೆ.

ವರಪೂಜೆಗೆ ಬೇಕಾಗುವ ಸಾಮಗ್ರಿಗಳು:

– ಅರಿಶಿಣ ಕುಂಕುಮದ ತಟ್ಟೆ.
– ಕಲಶ ಕನ್ನಡಿಯ ತಟ್ಟೆ
– ೨ ಕೆ.ಜಿ.ಅಕ್ಕಿ
– ೮ ತೆಂಗಿನಕಾಯಿಗಳು
– ೧ ಡಜನ್ ಬಾಳೆಹಣ್ಣುಗಳು
– ೩ ಬೆಲ್ಲದ ಅಚ್ಚುಗಳು
– ಕರ್ಪೂರ
– ಊದಿನಕಡ್ಡಿಗಳು
– ಕಾಡಿಗೆಯ ಡಬ್ಬಿ
– ಕೊಬ್ಬರಿ ಸಕ್ಕರೆ
– ೧/೨ ಕೆ.ಜಿ. ಬಿಡಿ ಹೂಗಳು
– ೧೦ ಮೊಳ ಕಟ್ಟಿದ ಹೂವುಗಳು
– ೨ ದಪ್ಪ ಹಾರಗಳು
– ೫ ಡಿಸೈನ್ ಕೊಬ್ಬರಿ ಗಿಟಕುಗಳು
– ೫ ಕೊಬ್ಬರಿ ಬಟ್ಟಲು ಕೆತ್ತಿದ್ದು
– ವರನಿಗೆ ಕೊಡಲು ಉಡುಗೊರೆ (ಪ್ಯಾಂಟು–ಷರಟು,ಚೈನು, ವಾಚು, ಬ್ರೇಸಲೆಟ್, ಪೆನ್ನು, ಕರ್ಚಿಫ್, ಪರಫ್ಯೂಮ್)
– ದೀಪದ ಕಂಬ
– ಬತ್ತಿಗಳು
– ಎಣ್ಣೆ
– ಬೆಂಕಿಪೊಟ್ಟಣ
– ೫ ತರಹದ ಹಣ್ಣಿನ ತಟ್ಟೆ
– ಶೋ ಸಾಮಾನುಗಳು.
– ಹಾಲು (ಲೋಟದಲ್ಲಿ)
– ಗಂಧ (ಸುಗಂಧ)

- ಆರತಿ ತಟ್ಟೆ
- ಖಾಲಿ ಟ್ರೇ / ತಟ್ಟೆ
- ಪಂಚಪಾತ್ರೆ, ಉದ್ದರಣೆ, ಅರ್ಘ್ಯಪಾತ್ರೆ.
- ಹಸೆಮಣೆ / ಹಾಸು ವಸ್ತ್ರ
- ಆರತಿತಟ್ಟೆ / ನೀರು
- ಹೂಬತ್ತಿ
- ಬೆಳ್ಳಿತಟ್ಟೆ, ತಂಬಿಗೆ ನೀರು
- ಅರಿಶಿಣ ಕುಂಕುಮ ಚೀಟಿ
- ಸಕ್ಕರಿ ಕೊಬ್ಬರಿ ಚೀಟಿ
- ಉಡಿ ತುಂಬುವ ಪಾಕಿಟ್
- ಬುಕ್ಕಿಟ್ಟು ಗುಲಾಲು
- ಟೊಪ್ಪಿಗೆ
- ವಿಳೆದೆಲೆ ಅಡಿಕೆ
- ಗೋಪುರ
- ಪುರಿ ಉಂಡೆ
- ಚಕ್ಕುಲಿ
- ಸಕ್ಕರಿ ಅಚ್ಚು
- ಹುರಿಗಡಲೆ ಬೆಲ್ಲದ ಅಚ್ಚು
- ಅತ್ತರದಾನಿ ಗುಲಾಬದಾನಿ
- ತೆಂಗಿನಕಾಯಿ ಹೆಣೆದಿದ್ದು

ರುಕ್ಕೋತ / ಭೂಮ

ರುಕ್ಕೋತ ಮತ್ತು ಭೂಮಕ್ಕೆ ವರನ ಕಡೆಯ ಹಿರಿಯರನ್ನು ಮತ್ತು ಹತ್ತಿರದವರನ್ನು ಕೂಡಿಸುವರು.

ರುಕ್ಕೋತ / ಭೂಮಕ್ಕೆ ಬೇಕಾಗುವ ಸಾಮಾನುಗಳು :

– ರಂಗೋಲಿ

– ರಂಗೋಲಿ ಕಲರ್

– ದೀಪದ ಕಂಬ

– ಆಪೋಷಣಕ್ಕೆ ಬೀಸಿದ ಸಕ್ಕರೆ, ಹಾಲು, ತುಪ್ಪ

– ಹಾಲು ತುಪ್ಪದ ಪಾತ್ರೆಗಳು

– ಪರಾತ

– ೧ ತಪ್ಪಲೆ,

– ೧ ಕೊಳ ತಪ್ಪಲೆ

– ೧ ಸೌಟು

– ೧ ಬೆಳ್ಳಿ ಬಟ್ಟಲು ಇಟ್ಟುಕೊಂಡು ವರ ಊಟಕ್ಕೆ ಕುಳಿತಾಗ ವಧು ಆಪೋಷಣ ಹಾಕಬೇಕು.

– ಬೆಳ್ಳಿ ದೀಪದ ಕಂಬ

– ಬೆಳ್ಳಿಯ ತಟ್ಟೆ ಲೋಟಾ ತಂಬಿಗೆ (ಊಟಕ್ಕೆ)

– ಆರತಿಯ ತಟ್ಟೆ ನೀಲಾಂಜನ

– ಗೋದಿ ಹಿಟ್ಟು

ಸುರಗಿ/ಮಲೆನೀರು

ಬೇಕಾಗುವ ಸಾಮಗ್ರಿಗಳು :

- ಕೊಬ್ಬರಿ ಎಣ್ಣೆ
- ೫ ತಂಬಿಗೆ ತಾಮ್ರದ್ದು
- ಬಕೆಟ್ಗಳು
- ಸುರಗಿಗೆ ಸುತ್ತಲು ದಾರ
- ಶ್ಯಾಂಪೊ
- ೫ ಟವೆಲ್ / ಪಂಚೆ
- ೫ ಮಣೆ
- ಅರಿಶಿಣ ಕುಂಕುಮ
- ಆರತಿತಟ್ಟೆ
- ವಿಳೆದೆಲೆ
- ಸುಣ್ಣ

ನಾಂದಿ ಶಾಸ್ತ್ರ

ವಿವಾಹ ಶುಭ ಕಾರ್ಯಕ್ರಮವಾಗಿರುವದರಿಂದ ನಾಂದಿಶ್ರಾದ್ಧ ಅವಶ್ಯಕ. ಇದನ್ನು ವೃದ್ಧಿ ಶ್ರಾದ್ಧವೆಂದೂ ಕರೆಯುತ್ತಾರೆ. ದೇವ ಮಾತೃಕೆಯರು (ಬ್ರಾಹ್ಮಿ, ವೈಷ್ಣವಿ, ಕೌಮಾರಿ, ಇಂದ್ರಾಣಿ, ವರಾಹಿ,ಚಾಮುಂಡ) ಮತ್ತು ಮನುಷ್ಯ ಮಾತೃಕೆಯರು (ಮಾತೃ, ಪಿತಾಮಹಿ, ಪ್ರಪಿತಾಮಹಿ)ಇವರನ್ನು ಅರ್ಚಿಸಿ ನಾಂದಿ ಶ್ರಾದ್ಧ ಆರಂಭವಾಗುತ್ತದೆ. ಇದರಿಂದ ಪಿತೃ ದೇವತೆಗಳ ಆಶೀರ್ವಾದ / ಅನುಗ್ರಹ ವಿವಾಹ ಶುಭಕ್ಕೆ ದೊರೆಯುತ್ತದೆ. ನಾಂದಿಗೆ ಮಂಗಳವಾರ/ ಶನಿವಾರ ನಿಷಿದ್ಧ. ನಾಂದಿಗೆ ಸಮಯ ಪೂರ್ವಾಹ್ನ.

ನಾಂದಿ ಸಮಯದಲ್ಲಿ ವಧುವಿನ / ವರನಕಡೆಯ ಹಿರಿಯರಿಗೆ / ಹಿರಿಯ ದಂಪತಿಗಳಿಗೆ ಪಾದಪೂಜೆ ಮಾಡಿ ಶಕ್ತ್ಯಾನುಸಾರ ಉಡುಗೊರೆ ಕೊಟ್ಟು ಆಶೀರ್ವಾದ ಪಡೆಯುವ ಪದ್ಧತಿ ಇದೆ.

ನಾಂದಿ ಶಾಸ್ತ್ರಕ್ಕೆ ಬೇಕಾಗುವ ಸಾಮಾನು –

- ಸಿದ್ಧ ಪಡಿಸಿದ ಅರಿಶಿಣ ಕುಂಕುಮದ ತಟ್ಟೆ
- ಕಲಶ ಕನ್ನಡಿ
- ೫೦ ಅಡಿಕೆ ಬೆಟ್ಟ
- ಕರ್ಪೂರ / ಮಂಗಳಾರತಿ ಬತ್ತಿ
- ೫ ಬೆಲ್ಲದ ಅಚ್ಚು
- ೪ ಒಣಕೊಬ್ಬರಿ ಬಟ್ಟಲುಗಳು
- ೧ ಬಾಟಲ್ ತುಪ್ಪ
- ನವಗ್ರಹ ಧಾನ್ಯಗಳ ಪೊಟ್ಟಣ
- ೨ ತಾಮ್ರದ ಕಳಶ
- ೨ ಬ್ಲೌಜಪೀಸ್, ೨ ಶಲ್ಯೆ
- ಮಡಿಪಂಚೆ
- ಹೊಸ ಮರ / ಬುಟ್ಟಿ
- ೧ ದೊನ್ನೆ ಕಟ್ಟು
- ೧೦೦ ಗ್ರಾಮ್ ಜೇನುತುಪ್ಪ
- ೧ ಸುಣ್ಣದ ಬಾಟಲ್
- ಸ್ವಲ್ಪ ಭತ್ತದ ಅರಳು
- ಸ್ವಲ್ಪ ಅಕ್ಕಿ ಹಿಟ್ಟು
- ಸ್ವಲ್ಪ ಮಾವಿನ ಸೊಪ್ಪು
- ೨೫ ವಿಳೆದೆಲೆಗಳು

- ೫ ಕೆ,ಜಿ. ಅಕ್ಕಿ
- ೧೦ ತೆಂಗಿನಕಾಯಿಗಳು
- ಮನೆದೇವರಿಗೆ ಸೀರಿ ಖಣ ತಾಳಿ
- ಟವೆಲು
- ಅರಿಶಿಣ ಬೇರು
- ೧. ಕ್ಗ್ ಬಿಡಿ ಹೂವುಗಳು
- ೧೦ ಮೊಳ ಕಟ್ಟಿದ ಹೂವು
- ೧೨ ಬಾಳೆಹಣ್ಣುಗಳು
- ಹೂಬತ್ತಿ
- ದೀಪದ ಕಂಬ, ಎಣ್ಣೆ, ಚಮಚ
- ಬೆಂಕಿ ಪೊಟ್ಟಣ
- ೬ ಗೆಜ್ಜೆವಸ್ತ್ರ
- ೪ ಅಗ್ರದ ಬಾಳೆ ಎಲೆಗಳು
- ಹೋಮಕುಂಡ/ ಇಟ್ಟಿಗೆ, ಮರಳು
- ಹೋಮಕುಂಡಕ್ಕೆ ೫ ಕೆ.ಜಿ ಸೌದೆ ಚಕ್ಕೆ
- ೩೦೦ ಸಮಿತ್ತುಗಳು

ಹೋಮಕ್ಕೆ ಹಾಕಲು

- ೧೦೦ ಗ್ರಾಂ ಒಣ ದ್ರಾಕ್ಷಿ
- ೧೦೦ ಗ್ರಾಂ ಒಣ ಗೋಡಂಬಿ
- ೧೦೦ ಗ್ರಾಂ ಉತ್ತತ್ತಿ (ಒಣ ಖರ್ಜೂರ)
- ೧೦೦ ಗ್ರಾಂ ಬಾದಾಮಿ
- ೧೦೦ ಗ್ರಾಂ ಕಲ್ಲುಸಕ್ಕರೆ
- ಅರ್ಧ ಮೀಟರ್ ರೇಷ್ಮೆ ಬಟ್ಟೆ
- ಹಿತ್ತಾಳೆ ಪಾತ್ರೆ (ತುಪ್ಪ ಇಟ್ಟುಕೊಳ್ಳಲು)
- ೨ ಹಿತ್ತಾಳೆ ಬಟ್ಟಲುಗಳು
- ೧ ಹಿತ್ತಾಳೆ ತಟ್ಟೆ (ಅಗ್ನಿ ತರಲು)
- ೧ ಬೀಸಣಿಕೆ (ಅಗ್ನಿ ಬೀಸಲು)
- ೨ ಲೋಟ ಅಥವಾ ಪಂಚಪಾತ್ರೆ (ಪುಣ್ಯಾಹಕ್ಕೆ)
- ಪಂಚಪಾತ್ರೆ, ಅರ್ಘ್ಯಪಾತ್ರೆ, ಉದ್ದರಣೆ
- ಹಲಗಾರತಿ–ಗಂಟೆ

- ನವಗ್ರಹಕ್ಕೆ ಇಡಲು ದುಡ್ಡು
- ಕೈ ಒರೆಸಿಕೊಳ್ಳುವ ಟವೆಲ್
- ರಂಗೋಲಿ
- ಹಸೆಮಣೆ / ಹಾಸುವಸ್ತ್ರ
- ಹಿರಿಯರಿಗೆ ಪಾದ ಪೂಜೆ ಸಮಯದಲ್ಲಿ ಕೊಡಲು ಉಡುಗೊರೆ, ತಟ್ಟೆ, ಎಲೆ ಅಡಿಕೆ.

****

ಗೌರೀ ಪೂಜೆ

ಛತ್ರದಲ್ಲಿ ಪ್ರಾತಃಕಾಲ ಮಂಗಳ ಸ್ನಾನ ನಂತರ ವಧು ಗುರು ಹಿರಿಯರ ಮಾರ್ಗದರ್ಶನದಲ್ಲಿ ಗೌರೀಪೂಜೆಯನ್ನು ಮಾಡುತ್ತಾಳೆ. ಗೌರೀ ಪೂಜೆಯ ನಂತರ ಸಿದ್ಧಪಡಿಸಿದ ೫ ಮೊರದ ಬಾಗಿಣಗಳಲ್ಲಿ ಒಂದನ್ನು ವರನ ತಾಯಿಗೂ ಮತ್ತು ಮಿಕ್ಕ ನಾಲ್ಕು ಬಾಗಿಣಗಳನ್ನು ವರನ ಹಿರಿಯ ಮುತ್ತೈದೆಯರಿಗೆ ಕೊಡಿಸುವದು ಪದ್ಧತಿ.

ಮೊರದ ಬಾಗಿನದಲ್ಲಿ ಇಡಬೇಕಾದ ವಸ್ತುಗಳು :

- ೫ ಮೊರದ ಜೊತೆ
- ಪ್ರತಿಯೊಂದು ಮರದ ಬಾಗಿಣದಲ್ಲಿ–
- ೫೦ ಗ್ರಾಂ ಅಕ್ಕಿ
- ೫೦ ಗ್ರಾಂ ತೊಗರೀಬೇಳೆ
- ೫೦ ಗ್ರಾಂ ರವೆ
- ೫೦ ಗ್ರಾಂ ಹೆಸರುಬೇಳೆ
- ೫೦ ಗ್ರಾಂ ಉದ್ದಿನಬೇಳೆ
- ೫೦ ಗ್ರಾಂ ಕಡಲೇ ಬೇಳೆ
- ೨ ಬೆಲ್ಲದ ಅಚ್ಚುಗಳು
- ೧ ತೆಂಗಿನಕಾಯಿ
- ೫ ವಿಳೆದೆಲೆ
- ಅಡಿಕೆ
- ಒಂದೊಂದು ಮರದ ಜೊತೆಯಲ್ಲಿ ೫ ತರಹದ ಹಣ್ಣುಗಳು
- ೫೦ ಗ್ರಾಂ ಅರಿಶಿಣ ಪೊಟ್ಟಣ
- ೫೦ ಗ್ರಾಂ ಕುಂಕುಮದ ಪೊಟ್ಟಣ
- ಬ್ಲೌಜ ಪೀಸ
- ದಕ್ಷಿಣೆ
- ಬಿಚ್ಚೋಲೆ ಕರಿಮಣಿ, ಮೂಗುಬಟ್ಟು, ತಾಳಿ, ಕಾಲುಂಗುರ

ಗೌರೀ ಪೂಜೆಗೆ ಬೇಕಾಗುವ ಸಾನಗ್ರಿಗಳು :

- ಅರಿಶಿಣ–ಕುಂಕುಮದ ತಟ್ಟೆ
- ಕರ್ಪೂರ
- ಊದಿನ ಕಡ್ಡಿ

- ದೀಪದ ಕಂಬ
- ಬತ್ತಿಗಳು
- ದೀಪದ ಎಣ್ಣೆ
- ಬೆಂಕಿ ಪೊಟ್ಟಣ
- ೧ ಡಿಸೈನ್ ಕೊಬ್ಬರಿ ಗಿಟಕು ಗೌರಿ
- ೧ ಅರಿಶಿಣದ ಗೌರಿ
- ೧ ಡಿಸೈನ್ ಗೆಜ್ಜೆವಸ್ತ್ರ
- ೫ ತರಹದ ಬಿಡಿ ಹೂ
- ಸ್ವಲ್ಪ ಕಟ್ಟಿದ ಹೂ
- ವಧುವಿಗೆ ಹಾಕಲು ಹೂವಿನ ಹಾರ
- ದಕ್ಷಿಣೆ ಬಾಸಿಂಗ
- ಮರದ ಬಾಗಿಣಗಳು
- ಧಾರೆ ಸೀರೆ
- ಮೇಲು ಹೊದಿಕೆ ಸೀರೆ
- ಬಂಗಾರದ ತಾಳಿ
- ನೈವೇದ್ಯಕ್ಕೆ ೫ ತರಹದ ಹಣ್ಣುಗಲು, ತೆಂಗಿನಕಾಯಿ
- ೫ ಸಾದಾ ಗೆಜ್ಜೆವಸ್ತ್ರಗಳು

ಕಾಶೀಯಾತ್ರೆ

ಹಿಂದಿನ ಕಾಲದಲ್ಲಿ ಗುರುಕುಲದಲ್ಲಿ ವೇದಾಧ್ಯಯನ ಮುಗಿಸಿ ವೇದ ಪಾರಂಗತನಾದ ಬ್ರಹ್ಮಚಾರಿ ಜೀವನದಲ್ಲಿ ವಿರಕ್ತಿಗೊಂಡು ಕಾಶಿಗೆ ಹೊರಟಿರುತ್ತಾನೆ. ಇಂತಹ ಬ್ರಹ್ಮಚಾರಿಯ ಮನ ಒಲಿಸಿ ತನ್ನ ಮಗಳನ್ನು ಕನ್ಯಾದಾನ ಮಾಡಿ ಧಾರೆಯೆರೆದು ಕೊಟ್ಟರೆ ಉತ್ತಮ ಅಳಿಯ ದೊರೆತಂತಾಗುತ್ತದೆ ಎಂದು ಕನ್ಯಾ ಮಾತಾ/ಪಿತೃಗಳು ಬ್ರಹ್ಮಚಾರಿಯನ್ನು ಒಪ್ಪಿಸಿ ಕರೆತರುವ ಆ ಕಾಲದ ಸನ್ನಿವೇಶ ಇಂದು ವಿವಾಹಾಂಗವಾದ ಕಾಶಿ ಯಾತ್ರೆಯಾಗಿದೆ. ಗಂಡ ಹೆಂಡಿರಿಬ್ಬರೂ ಒಂದು ಸಲವಾದರೂ ಕಾಶೀ ಯಾತ್ರೆ ಮಾಡಲಿ ಎಂಬ ಹಾರೈಕೆಯೂ ಇರಬಹುದು. ಒಟ್ಟಿನಲ್ಲಿ ಎಲ್ಲರೂ ನಮ್ಮ ಸಂಸ್ಕೃತಿಯ ತವರೂರಾದ ಕಾಶೀ ಕ್ಷೇತ್ರವನ್ನು ನೆನೆಪಿಸಿಕೊಳ್ಳುವದು ಈ ಕಾಶೀಯಾತ್ರೆಯ ಸಮಾರಂಭದ ಮುಖ್ಯ ಉದ್ದೇಶ.
ಕಾಶೀ ಯಾತ್ರೆಯ ಸಮಾರಂಭದ ಕೊನೆಯಲ್ಲಿ ವರನಿಗೆ ಪಂಚಪಾತ್ರೆ, ಉದ್ಧರಣೆ ಚೆಂಬು, ತಟ್ಟೆ, ಮುಂತಾದ ಬೆಳ್ಳಿಯ ಸಾಮಾನುಗಳನ್ನು, ಚಿನ್ನದ ಉಂಗುರ, ಕೈಗಡಿಯಾರ ಕೊಡುವ ಪದ್ಧತಿ ಇದೆ.

ಕಾಶೀಯಾತ್ರೆಯ ಕಾರ್ಯಕ್ರಮಕ್ಕೆ ಬೇಕಾಗುವ ಸಾಮಗ್ರಿಗಳು :

- ಅರಿಶಿಣ ಕುಂಕುಮದ ತಟ್ಟೆ
- ಸಂಕಲಿಕೆಪಂಚೆ (ಮಧ್ಯ ಕಟ್ ಮಾಡದೇ ಇದ್ದದ್ದು)
- ಪಾದರಕ್ಷೆಗಳು
- ಛತ್ರಿ (ಇದನ್ನು ವಧುವಿನ ಸೋದರ ಹಿಡಿಯುವ ಪದ್ಧತಿ ಇದೆ)
- ಕೋಲು / ಬೆತ್ತ (ವಾಕಿಂಗ ಸ್ಟಿಕ್)
- ಕನ್ನಡಿ
- ಕಾಡಿಗೆ ಡಬ್ಬಿ
- ಡಿಸೈನ್ ಬೀಸಣಿಕೆ
- ಡಿಸೈನ್ ತೆಂಗಿನಕಾಯಿ
- ಮಗುಟ / ಮಡಿ
- ಗೀತಾ ಪುಸ್ತಕ
- ಸಾಲಿಗ್ರಾಮ / ದೇವರು
- ಸಂಪುಷ್ಠ
- ಗಂಗೇ ಥಾಲಿ
- ತುಳಸಿ ಗಿಡ
- ಜನಿವಾರ

- ತುಪ್ಪ
- ಪಂಚಪಾತ್ರೆ ಉದ್ಧರಣೆ ನಿಮಗೆ
- ಕೋಡಬಳಿ ದಾರಕಟ್ಟಿ
- ಬೆಳ್ಳಿ ದೇವರ ಪೂಜೆ ಪಾತ್ರೆಗಳು
- ಪೇಟಾ
- ಬಾಸಿಂಗ
- ದಾರ
- ೧ ಲೋಟ ಹಸಿ ಹಾಲು
- ೧ ಡಜನ್ ಬಾಳೆಹಣ್ಣುಗಳು
- ಕಾಲು ತೊಳೆಯುವ ದೊಡ್ಡ ತಾಬಾಣ
- ಕಾಲು ಒರೆಸಲು ಹೊಸ ಟವೆಲ್
- ಕಾಶೀಯಾತ್ರೆ ಗಂಟು
- ಈಡುಗಾಯಿ
- ಆರತಿ ತಟ್ಟೆ / ನೀರು
- ಸ್ವಲ್ಪ ಬಿಡಿ ಹೂಗಳು
- ಸ್ವಲ್ಪ ಕಟ್ಟಿದ ಹೂ
- ವರನಿಗೆ ಹಾಕಲು ಹೂವಿನ ಹಾರ
- ದೀಪದಕಂಬ ಬತ್ತಿಗಳು
- ದೀಪದ ಎಣ್ಣೆ
- ಬೆಂಕಿಪೊಟ್ಟಣ
- ಗಂಟು ಕಟ್ಟಲು ಶಲ್ಯೆ
- ಮುದ್ರೆ ಗೋಪಿ ಚಂದನ
- ಅಕ್ಷತೆ ಅಂಗಾರ
- ಜನಿವಾರ

ಧಾರೆ / ಕನ್ಯಾದಾನ / ಮಾಂಗಲ್ಯಧಾರಣೆ

ವಧುವಿನಕಡೆಗೆ ಧಾರೆ / ಕನ್ಯಾದಾನ /ಮಾಂಗಲ್ಯಧಾರಣೆಗೆ ಬೇಕಾಗುವ ಸಾಮಗ್ರಿಗಳು

- ೫ ಕೆ.ಜಿ. ಅಕ್ಕಿ
-
- ೫ ಬಣ್ಣದ ಮಂತ್ರಾಕ್ಷತೆ
- ೧೫ ತೆಂಗಿನಕಾಯಿಗಳು
- ೪ ಚೆನ್ನಾಗಿರುವ ಬೆಲ್ಲದ ಅಚ್ಚುಗಳು
- ೨ ಒಣಕೊಬ್ಬರಿ ಬಟ್ಟಲುಗಳು
- ೫೦ ಗ್ರಾಂ ಜೀರಿಗೆ
- ೨ ಹಸೆಮಣೆ ಶಲ್ಯ
- ೧ ಮೂರುಎಳೆಯ ದಾರದ ಉಂಡಿ
- ೧ ಮೀಟರ್ ಕಂಬಳಿ ದಾರ
- ೨ ಬ್ಲೌಜ ಪೀಸ
- ೨ ಜನಿವಾರ
- ೫ ಅರಿಶಿಣದ ಬೇರು
- ಮಾಂಗಲ್ಯ
- ೨ ಚಿಬ್ಬಲು
- ೩. ಕೆ.ಜಿ. ತೊಳೆದ ಅಕ್ಕಿ
- ೨ ಲೋಟ ತೊಳೆದ ಹಾಲು
- ಗಂಗೆ ಥಾಲಿ
- ಲಕ್ಷ್ಮಿನಾರಾಯಣರ ವಿಗ್ರಹ
- ತುಳಸಿ ದಳ / ಗಿಡ
- ೪ ಮಲ್ಲಿಗೆಯ ಹಾರ
- ೧೦ ಮೊಳ ಕಟ್ಟಿದ ಹೂ
- ೧ ಕೆ.ಜಿ. ಬಿಡಿ ಹೂ
- ಮಂತ್ರಾಕ್ಷತೆ
- ಡೊಗ್ಗಾಲು ಕೃಷ್ಣ
- ೩೨ ಅಕ್ಕಿ ಹಿಟ್ಟಿನಿಂದ ಮಾಡಿದ ದೀಪದ ಬಟ್ಟಲುಗಳು
- ಹೂಬತ್ತಿ ಎಣ್ಣೆ
- ಅರಿಶಿಣ ಕುಂಕುಮ ತಟ್ಟೆ

– ೨ ಹೂವಿನ ಹಾರ
– ಅಂತರಪಟ ಹಿಡಿಯಲು ಪಂಚೆ
– ಭತ್ತದ ಅರಳು
– ತುಪ್ಪ
– ಉಪ್ಪು ಅಕ್ಕಿ (ಸಪ್ತಪದಿಗೆ ಆನೆ ಬರೆಯಲು)
– ಕಲ್ಲು
– ಅರಿಶಿಣ ಕುಂಕುಮದ ಚೀಟಿ
– ಉಡಿತುಂಬುವ ಪಾಕೀಟ್
– ಬೆಳ್ಳಿ ಸಂಪುಷ್ಟದಲ್ಲಿ ಸಾಲಿಗ್ರಾಮ
– ಬೆಳ್ಳಿ ಬಟ್ಟಲು
– ಶಾವಿಗೆ ಪಾಯಸ / ಮೊಸರು– ಜೇನುತುಪ್ಪದ ಮಿಶ್ರಣ

ವರನ ಕಡೆ ಸಾಮಗ್ರಿಗಳು :

ವಧುವಿಗೆ ಸೀರೆ
– ಬಂಗಾರದ ತಾಳಿ
–ವಧುವಿಗೆ ಆಭರಣಗಳು

ಕಂಕಣ

ವರನ ಬಲ ಹಸ್ತಕ್ಕೆ ಹಾಗೂ ವಧುವಿನ ಎಡ ಹಸ್ತಕ್ಕೆ ಕಟ್ಟುವ ರಕ್ಷಾ ಸೂತ್ರಕ್ಕೆ ಕಂಕಣ ಎಂದು ಹೆಸರು. ಕಟ್ಟುವ ಮೊದಲು ರಕ್ಷಾ ಸೂತ್ರಕ್ಕೆ ಷೋಡಶೋಪಚಾತ ಪೂಜೆ ನಡೆಯುತ್ತದೆ. ಇಂದ್ರ, ವಾಸುಕಿ ಮತ್ತು ಸರ್ಪಗಳಿಗೆ ಮಂತ್ರ ಪುರಸ್ಕರವಾಗಿ ವಂದನೆ ಮಾಡಿಸುತ್ತಾರೆ.

ಬೇಕಾಗುವ ಸಾಮಗ್ರಿ:

- **ಹಸಿದಾರ**
- **ಪೂಜಾ ಸಾಮಗ್ರಿ**
- **ಮಂಗ್ರಳ ದ್ರವ್ಯಗಳು**

ಸೋಬಲಕ್ಕಿ/ ಹೆಣ್ಣನ್ನು ಒಪ್ಪಿಸುವದು

– ಅರಿಶಿಣ ಕುಂಕುಮದ ತಟ್ಟೆ
– ಕಲಶ
– ೫ ಕೆ.ಜಿ. ಅಕ್ಕಿ
– ೫ ತೆಂಗಿನಕಾಯಿಗಳು
– ೫ ಬೆಲ್ಲದ ಅಚ್ಚು
– ೨ – ೧೦೦ ಗ್ರಾಂ ಅರಿಶಿಣದ ಪೊಟ್ಟಣಗಳು
– ೨ – ೧೦೦ ಗ್ರಾಂ ಕುಂಕುಮದ ಪೊಟ್ಟಣಗಳು
– ೫ ಅರಶಿಣದ ಬೇರು
– ೫ ಅಡಿಕೆ ಪುಡಿ ಪ್ಯಾಕೆಟ್
– ೧೦ ವಿಳೆದೆಲೆಗಳು
– ಸೀರೆ ಬ್ಲೌಜ ಪೀಸ
– ೧ ೧/೨ ಕೆ.ಜಿ. ಹುರಿಗಾಳು
– ೨ ೧/೨ ಕೆ,ಜಿ. ಚಕ್ಕುಲಿ ಹಿಟ್ಟು
– ೧೦ ಪುಳ್ಳಂಗಾಯಿ ಉಂಡೆಗಳು
– ಪಟ್ಟದ ಬೊಂಬೆಗಳು
– ಚಿಕ್ಕ ತೊಟ್ಟಿಲು
– ಕೃಷ್ಣ ೧ ಜೊತೆ ಬೆಳ್ಳಿಯ ನೀಲಾಂಜನ / ಸೊಡಿಲು
– ೧ ಕುಂಕುಮದ ಭರಣಿ
– ೧ ಕಾಡಿಗೆ ಡಬ್ಬಿ
– ೧ ಬಾಚಣಿಕೆ
– ೧ ಕನ್ನಡಿ
– ೨ ೧/೨ ಕೆ.ಜಿ. ಗಟ್ಟಿ ಅವಲಕ್ಕಿ
– ೧ ಒಳಲೆ
– ೧ ಮಿಡಿಯಂ ಸೈಜು ಟವೆಲು
– ವಧುವಿಗೆ ಕೊಡುವ ಬೆಳ್ಳಿಯ ವಸ್ತುಗಳು (೧ ತಟ್ಟೆ, ೪ ಬಟ್ಟಲು, ೧ ಗಂಧದ ಬಟ್ಟಲು, ೧ ಆರತಿ ತಟ್ಟೆ, ೧ ಜೊತೆ ದೀಪದ ಕಂಬ.

ಬೀಗರ ಔತಣ ಆದಮೇಲೆ ಒಂದು ಬಾಕ್ಸನಲ್ಲಿ / ಪ್ಲಾಸ್ಟಿಕ್ ಡ್ರಮ್ನಲ್ಲಿ ಹಾಕಿ ಕೊಡುವದು

– ೨೦ ದೊಡ್ಡ ಸೈಜಿನ ಚಕ್ಕುಲಿಗಳು
– ೧೦ ದೊಡ್ಡ ಸೈಜಿನ ಮುಚ್ಚೋರೆಗಳು
– ೧೦ ದೊಡ್ಡ ಸೈಜಿನ ತೆಂಗೊಳಲುಗಳು
– ೨೦ ದೊಡ್ಡ ಸೈಜಿನ ಅವಲಕ್ಕಿ ಪುರಿ ಉಂಡೆಗಳು
– ೫ ದೊಡ್ಡ ಸೈಜಿನ ಅರಳು ಉಂಡೆಗಳು
– ೫ ದೊಡ್ಡ ಸೈಜಿನ ಕಡಲೆಕಾಯಿ ಬೀಜದ ಉಂಡೆಗಳು
– ೫ ದೊಡ್ಡ ಸೈಜಿನ ಹುರಿಗಡಲೆ ಉಂಡಿಗಳು

ಇತರ ಸಿಹಿ ತಿಂಡಿಗಳು